# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)

ಮುಧೋಳ ರಸ್ತೆ, ಜಮಖಂಡಿ-587301 ಬಾಗಲಕೋಟೆ ಜಿಲ್ಲೆ

# Bagalkot University

(State Public University of Govt. of Karanataka)

Mudhol Road, Jamkhandi-587301 Dist: Bagalkote

Mail ID : bgkujkd@gmail.com

Website: https:// bgku.ac.in

**ಕುಲಸಚಿವರ ಕಾರ್ಯಾಲಯ**

Tel No: (08353)295123, 295124


BGKUJ/RO/2024-25/ 774 Date: 25.10.2024

## ಅತಿಥಿ ಉಪನ್ಯಾಸಕರ ಮೌಖಿಕ ಸಂದರ್ಶನ ವೇಳಾಪಟ್ಟಿ ಪ್ರಕಟಣೆ.

2024-25ನೇ ಶೈಕ್ಷಣಿಕ ಸಾಲಿಗಾಗಿ, ಬಾಗಲಕೋಟ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ (PG) ಅಧ್ಯಯನ ವಿಭಾಗಗಳಿಗೆ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಯುಜಿಸಿ ನಿಯಮಾವಳಿ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ನಿಯಮಾನುಸಾರ ಪೂರ್ಣಕಾಲಿಕ/ಅರೆಕಾಲಿಕ ತಾತ್ಕಾಲಿಕ ಉಪನ್ಯಾಸಕರ ಸೇವೆಯನ್ನು ಪಡೆಯಲು ಈಗಾಗಲೇ ಬಾಗಲಕೋಟ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಿದ ಅಭ್ಯರ್ಥಿಗಳು ಈ ಕೆಳಕಾಣಿಸಿದ ವಿಭಾಗವಾರು ವಿಷಯಗಳಿಗೆ ಈ ಕೆಳಗೆ ನಮೂದಿಸಲಾದ ದಿನಗಳಂದು ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿಯ ಮುಖ್ಯ ಆವರಣದ ಕೌಟಿಲ್ಯ ಸಭಾಂಗಣದಲ್ಲಿ ವಿಭಾಗವಾರು ವಿವಿಧ ವಿಷಯಗಳಿಗೆ ಸೂಚಿಸಿದ ದಿನ ಹಾಗೂ ಸಮಯದಲ್ಲಿ ಅರ್ಜಿ ಪ್ರತಿ ಮತ್ತು ಮೂಲ ಶೈಕ್ಷಣಿಕ ದಾಖಲೆಗಳೊಂದಿಗೆ **ಒಂದು ಗಂಟೆ ಮುಂಚಿತವಾಗಿ** ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.

**ಮೌಖಿಕ ಸಂದರ್ಶನದ ವೇಳಾಪಟ್ಟಿ**

| ಕ್ರ.ಸಂ | ವಿಷಯ | ದಿನಾಂಕ ಮತ್ತು ಸಮಯ |
|---|---|---|
| 1 | ಗಣಿತಶಾಸ್ತ್ರ | 29-10-2024 ಬೆಳಗ್ಗೆ 11.00 |
| 2 | ಎಂ.ಸಿ.ಎ | |
| 3 | ಸಮಾಜಕಾರ್ಯ | |
| 4 | ಇಂಗ್ಲೀಷ | |
| 5 | ರಾಜ್ಯಶಾಸ್ತ್ರ | |
| 6 | ವಾಣಿಜ್ಯಶಾಸ್ತ್ರ | |
| 7 | ಎಂ.ಬಿ.ಎ | |

ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಪ್ರತ್ಯೇಕ ಪತ್ರಗಳನ್ನು ಕಳುಹಿಸುವುದಿಲ್ಲ. ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಈಗಾಗಲೇ ಪ್ರಕಟಿಸಿದ ಸೂಚನೆಗಳಿಗೆ ಅನುಗುಣವಾಗಿ ಭರ್ತಿಮಾಡಿದ ದ್ವಿ-ಪ್ರತಿ ಅರ್ಜಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವಂತೆ ತಿಳಿಸಲಾಗಿದೆ.

## ವಿಶೇಷ ಸೂಚನೆ:

1. ಸದರಿ ಹುದ್ದೆಗಳು ಸಂಪೂರ್ಣ ತಾತ್ಕಾಲಿಕವಾಗಿದ್ದು, ಯಾವುದೇ ಮಂಜುರಾದ ಹುದ್ದೆಗಳಿಗೆ ಎದುರಾಗಿ ಇರುವದಿಲ್ಲ.

2. ಮೌಖಿಕ ಸಂದರ್ಶನ (Walk-in Interview) ದಿನಾಂಕ ಮತ್ತು ಸಮಯ ಬದಲಾವಣೆಯಾದರೆ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣ ಪ್ರತಿನಿತ್ಯ ಗಮನಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರ ಕಾರ್ಯಾಲಯದ ಸಹಾಯವಾಣಿ ಸಂಖ್ಯೆ: 9886040217 & 08353 -295124 ಗೆ ಕರೆ ಮಾಡಿ ಕೂಡಾ ತಿಳಿಯಬಹುದು.

3. ಅತಿಥಿ ಉಪನ್ಯಾಸಕರ ಸಂದರ್ಶನಕ್ಕಾಗಿ ಬರುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ತೆರನಾದ ಭತ್ಯೆಗಳನ್ನು ನೀಡಲಾಗುವದಿಲ್ಲ.

4. ಸಂದರ್ಶನದ ಸಮಯಕ್ಕಿಂತ ಒಂದು ಗಂಟೆ ಮುಂಚಿತವಾಗಿ ಅಭ್ಯರ್ಥಿಗಳ ಮೂಲ ಶೈಕ್ಷಣಿಕ ದಾಖಲೆಗಳನ್ನು ಪರಿಶೀಲಿಸಲಾಗುವುದು.

ಕುಲಸಚಿವರು

ಕುಲಸಚಿವರು
ಬಾಗಲಕೋಟ ವಿಶ್ವವಿದ್ಯಾಲಯ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಜಮಖಂಡಿ-587301, ಜಿ. ಬಾಗಲಕೋಟ.